

1983ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ಪುರುಷರ ತಂಡ ಚಾಂಪಿಯನ್ ಆದಮೇಲೆ ಈ ಕ್ರೀಡೆಯು ದೇಶದಾದ್ಯಂತ ವ್ಯಾಪಿಸಿ ಪ್ರತಿಭೆಗಳು ಹೊರಬಂದರು. ಈಗ ಮಹಿಳಾ ಕ್ರಿಕೆಟ್ ವಿಷಯದಲ್ಲೂ ಈ ಗೆಲುವು ಅಂಥದ್ದೇ ಸಂದರ್ಭ ಸೃಷ್ಟಿಸುವುದರಲ್ಲಿ ಅನುಮಾನ ಇಲ್ಲ.

**-ಹರ್ಮನ್‌ಪ್ರೀತ್ ಕೌರ್,** ಭಾರತ ಕ್ರಿಕೆಟ್ ತಂಡದ ನಾಯಕಿ

ಭಲ್ಲೆ ಭಲ್ಲೆ... ಹರ್ಮನ್‌ಪ್ರೀತ್ ನೃತ್ಯ

## ಹರ್ಮನ್‌ಪ್ರೀತ್ ಸಮಯಪ್ರಜ್ಞೆ

ಬ್ಯಾಟಿಂಗ್‌ನಲ್ಲಿ ಹಳೆಯ ಲಯದಲ್ಲಿ ಇರದೇ ಇದ್ದರೂ ನಾಯಕಿಯಾಗಿ ಹರ್ಮನ್‌ಪ್ರೀತ್ ಸಂಕಷ್ಟಗಳನ್ನು ಎದುರಿಸುವಲ್ಲಿ ತೋರಿದ ಸಮಯಪ್ರಜ್ಞೆ, ವಿಶ್ವಕಪ್ ಎತ್ತಿಹಿಡಿಯಲು ಕಾರಣವಾದ ಪ್ರಮುಖ ಸಂಗತಿಗಳಲ್ಲೊಂದು. ಆಸ್ಟ್ರೇಲಿಯಾ ಎದುರು ಸೆಮಿಫೈನಲ್‌ನಲ್ಲಿ 89 ರನ್‌ಗಳನ್ನು ಕಲೆಹಾಕಿ ವೈಯಕ್ತಿಕವಾಗಿ ಅವರು ತೋರಿದ ಸಾಧನೆ ಸ್ಮರಣೀಯ. ಟೂರ್ನಿಯ ನಡುಘಟ್ಟದಲ್ಲಿ ಸತತವಾಗಿ ಮೂರು ಪಂದ್ಯಗಳಲ್ಲಿ ಭಾರತ ತಂಡ ಸೋತಿತು. ಗೆಲ್ಲಬಹುದಾದ ಹಂತದಲ್ಲಿ ಪಂದ್ಯಗಳು ಜಾರಿದ್ದೆಲ್ಲಿ ಎನ್ನುವ ಪ್ರಶ್ನೆ ಧುತ್ತನೆ ಎದುರಲ್ಲಿ ಮೂಡಿತು. ಟೀಕಾಕಾರರ ದನಿ ಏರತೊಡಗಿತು.

ಆಡುವ ಹನ್ನೊಂದು ಮಂದಿಯ ತಂಡದಿಂದ ಹೊರಗಿಡಲಾಗಿದ್ದ ಜೆಮಿಮಾ ಅವರನ್ನು ವಾಪಸ್ ಮೈದಾನಕ್ಕೆ ಇಳಿಸಿದ್ದೇ ಅಲ್ಲದೆ ಮೂರನೇ ಕ್ರಮಾಂಕಕ್ಕೆ ಬಡ್ತಿ ನೀಡುವ ನಿರ್ಧಾರ ಎಲ್ಲ ನಾಯಕಿಯರೂ ಮಾಡುವಂಥದ್ದಾಗಿರಲಿಲ್ಲ. ಫೈನಲ್‌ನಲ್ಲಿ ಶಫಾಲಿ ಕೈಗೆ ಚೆಂಡಿತ್ತಿದ್ದು ಇನ್ನೊಂದು ಯಶಸ್ವಿ ಪ್ರಯೋಗ. ಇಂತಹ ಪ್ರಯತ್ನಗಳೆಲ್ಲ ಜೂಜಾಟದಂತೆ. ಅವುಗಳಲ್ಲಿ ಹರ್ಮನ್‌ಪ್ರೀತ್ ಯಶಸ್ಸು ಸಾಧಿಸಿದ್ದು ಅವರ ದೃಢನಂಬಿಕೆಯ ಕಾರಣದಿಂದ. ದಕ್ಷಿಣ ಆಫ್ರಿಕಾ ತಂಡದ ಕೊನೆಯ ಆಟಗಾರ್ತಿಯ ಕ್ಯಾಚನ್ನು ಓಡೋಡಿ ಹಿಡಿದ ಅವರು ದಶಕಗಳ ಭಾರತದ ಕನಸನ್ನು ನನಸು ಮಾಡಿಕೊಂಡರು.

ಪ್ರತಿ ಪಂದ್ಯದಲ್ಲೂ ಹೊಸತನ್ನು ಕಲಿತೆವು. ತಪ್ಪಿನಿಂದ ಅರಿತೆವು. ಬ್ಯಾಟಿಂಗ್, ಬೌಲಿಂಗ್ ಯಾವುದೇ ಬಂದರೂ ನಾನು ಜೀವಿಸಿದೆ. ವಿಶ್ವಕಪ್ ಗೆಲುವಿನ ಫಲಿತಾಂಶ ಎಲ್ಲಕ್ಕೂ ಒಲಿದಿರುವುದು ಖುಷಿಯ ಸಂಗತಿ.

**-ದೀಪ್ತಿ ಶರ್ಮಾ,** ಸರಣಿ ಶ್ರೇಷ್ಠ ಆಟಗಾರ್ತಿ

## ದೀಪ್ತಿ ಶರ್ಮಾ ಆಲ್‌ರೌಂಡ್ ಆಟದ ಸೊಗಸು

ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಆಟಗಾರ್ತಿ ದೀಪ್ತಿ ಶರ್ಮಾ. ಇಷ್ಟನ್ನೇ ಹೇಳಿದರೆ ಅಪೂರ್ಣವಾಗುತ್ತದೆ. ಮಹತ್ವದ ನಾಕ್‌ಔಟ್ ಪಂದ್ಯಗಳಲ್ಲಿ ಸಂಯಮದ ಮೂರ್ತಿಯಂತೆ ಬ್ಯಾಟಿಂಗ್ ಮಾಡಿದ್ದಷ್ಟೇ ಅಲ್ಲದೆ ಬೌಲಿಂಗ್‌ನಲ್ಲೂ ಅಗತ್ಯವಿರುವಾಗಲೆಲ್ಲ ವಿಕೆಟ್ ಪಡೆದರು. ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್‌ನಲ್ಲಿ ಅವರು ಏನಿಲ್ಲವೆಂದರೂ 15–20 ರನ್‌ಗಳನ್ನು ನಿಯಂತ್ರಿಸಿದರು. ಅಂತಿಮ ಸ್ಪೆಲ್‌ನಲ್ಲಿ ನೋಡನೋಡುತ್ತಲೇ ಎರಡು ವಿಕೆಟ್‌ಗಳನ್ನು ಕಿತ್ತಿದ್ದೇ ಇದಕ್ಕೆ ಸಾಕ್ಷಿ.

ಫೈನಲ್‌ನಲ್ಲಿ ಪರಮ ಸಂಯಮದಿಂದ ಆಡಿ, ಎಸೆತವೊಂದಕ್ಕೆ ಒನ್ ರನ್‌ನಂತೆ ಗಳಿಸಿದರು. ಆ ಅರ್ಧ ಶತಕದ (58) ಜೊತೆಗೆ ಐದು ವಿಕೆಟ್‌ಗಳ ಗೊಂಚಲು ಹಾಗೂ ಫೀಲ್ಡಿಂಗ್‌ನಲ್ಲಿನ ಚುರುಕುತನ ಸಹಜವಾಗಿಯೇ ಅವರನ್ನು ಸರಣಿ ಶ್ರೇಷ್ಠ ಆಟಗಾರ್ತಿಯ ಪಟ್ಟಕ್ಕೆ ತಂದು ನಿಲ್ಲಿಸಿತು.

ಇವಿಷ್ಟು ಮಹತ್ವದ ತಿರುವುಗಳಾದರೂ, ನ್ಯೂಜಿಲೆಂಡ್ ಎದುರು ಜಯ ಗಳಿಸಲೇಬೇಕಿದ್ದ ಪಂದ್ಯದಲ್ಲಿ ಸ್ಮೃತಿ ಹಾಗೂ ಪ್ರತೀಕಾ ಮೊದಲ ವಿಕೆಟ್ ಜೊತೆಯಾಟದಲ್ಲಿ 212 ರನ್‌ಗಳನ್ನು ಸೇರಿಸಿದ್ದು, ಪಂದ್ಯಕ್ಕೆ ವೇಗ ಬೇಕಾದಾಗಲೆಲ್ಲ ರಿಚಾ ಸಿಕ್ಸರ್‌ಗಳನ್ನು ಲೀಲಾಜಾಲವಾಗಿ ಹೊಡೆದದ್ದು, ಅವುಡುಗಚ್ಚಿ ಆಡುವ ಪರಿಸ್ಥಿತಿಗೆ ಅಮನ್ಜೋತ್ ಆಲ್‌ರೌಂಡ್ ಪ್ರದರ್ಶನದ ಮೂಲಕ ಸ್ಪಂದಿಸಿದ್ದು, ಶ್ರೀ ಚರಣಿ ಅಚ್ಚರಿಯ ಅಸ್ತ್ರವಾಗಿ ಒದಗಿಬಂದದ್ದು ಭಾರತದ ಗೆಲುವಿಗೆ ಕಾರಣವಾದ ಪ್ರಮುಖ ಸಂಗತಿಗಳು.

